ಸಾಕ್ಷಿಯನ್ನು ದಿನಾಂಕ 15.10.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ 1 ರಿಂದ 6 ನೇ ಆರೋಪಿಗಳ ಪರ ಶ್ರೀ.ಎನ್.ಬಿ. ವಕೀಲರಿಂದ :**

16) ನಾನು ಪದವಿ ವ್ಯಾಸಂಗ ಮಾಡಿಕೊಂಡಿರುತ್ತೇನೆ. ನನ್ನ ಹೆಂಡತಿ ಶೆಟ್ಟಿ ಬಣಜಿಗ ಜನಾಂಗಕ್ಕೆ ಸೇರಿರುತ್ತಾರೆ. ನನ್ನ ಹೆಂಡತಿ ಬಲಜಿಗ ಜನಾಂಗಕ್ಕೆ ಸೇರಿರುತ್ತಾರೆ ಎಂದರೆ ಸಾಕ್ಷಿಯು ಬಣಜಿಗ ಮತ್ತು ಬಲಜಿಗ ಎರಡೂ ಒಂದೇ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಅಭಿಯೋಜನೆ ಪರವಾಗಿ ಸಹಕಾರ ನೀಡಲು ನಾನು ವಕೀಲರಾದ ಶ್ರೀ. ವಿಷ್ಣುಮೂರ್ತಿ ಶಿಬರಾಯ ರವರನ್ನು ನೇಮಿಸಿಕೊಂಡಿರುತ್ತೇನೆ. ಸದರಿ ವಕೀಲರು ನನಗೆ ಸುಮಾರು 30 ವರ್ಷಗಳಿಂದ ಪರಿಚಯವಿರುತ್ತಾರೆ. ನನ್ನ ಪರವಾಗಿ ಸದರಿ ವಕೀಲರು ಎಲ್ಲಾ ಪ್ರಕರಣಗಳಲ್ಲಿ ಹಾಜರಾಗುತ್ತಾರೆ ಎಂದರೆ ಸರಿ.

17) ತುಮಕೂರಿನ ಟೌನ್ ಪೋ.ಠಾಣೆಯಲ್ಲಿ ನನ್ನ ವಿರುದ್ದ ರಾಬರಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಚೆಕ್ ಪೋಸ್ಟ್ ಸಂಬಂಧ ಪ್ರಕರಣ ದಾಖಲಾಗಿತ್ತು ಎಂದು ನುಡಿಯುತ್ತಾರೆ. ನಾನು ಚೆಕ್ ಬೌನ್ಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನ ಯಲಹಂಕಾದಲ್ಲಿ ಸುಮಾರು 10 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ನನ್ನ ಆಧಾರ್ ಕಾರ್ಡಿನಲ್ಲಿಯೂ ಸಹ ಯಲಹಂಕಾದ ವಿಳಾಸ ಇರುತ್ತದೆ. ದೂರಿನಲ್ಲಿಯೂ ಸಹ ನಾನು ಯಲಹಂಕಾದ ವಿಳಾಸವನ್ನುಕೊಟ್ಟಿರುತ್ತೇನೆ.

18) ಈ ಪ್ರಕರಣ ದಾಖಲಾದ ನಂತರ ಯಲಹಂಕಾದ ತಹಸೀಲ್ದಾರ್ ರವರು ಬಂದು ನನ್ನ ಜಾತಿಯ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆ ಬಗ್ಗೆ ನನ್ನ ಜಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ನನ್ನ ವಾಸ ಸ್ಥಳವನ್ನೂ ಸಹ ಅವರಿಗೆ ತಿಳಿಸಿರುತ್ತೇನೆ. ತಹಸೀಲ್ದಾರ್ ರವರು ನನ್ನ ವಿಳಾಸದ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಅವರ ಮುಂದೆ ನಾನು ಭೂಮಿಕಾ ಬಡಾವಣೆ, ಹೆಸರುಘಟ್ಟ ಮೈನ್ ರೋಡ್, ಚಿಕ್ಕಬಾಣಾವರ ಎಂದು ಹೇಳಿರುತ್ತೇನೆ. ನಾನು ದೂರಿನಲ್ಲಿ ನಮೂದಿಸಿರುವ ವಿಳಾಸದಲ್ಲಿ

ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ವಿರುದ್ಧ ಚೆಕ್ ಬೌನ್ಸ್ ಪ್ರಕರಣಗಳು ನೆಲಮಂಗಲ ಮತ್ತು ಬೆಂಗಳೂರಿನಲ್ಲಿ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ.

19) 7 ನೇ ಆರೋಪಿಯು ನನಗೆ ಬೆಂಗಳೂರಿನಲ್ಲಿ ಪರಿಚಯವಾಗಿರುತ್ತಾರೆ. ಅವರು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. 7 ನೇ ಆರೋಪಿಯು 5 ವರ್ಷಗಳ ಕಾಲ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಕೆಲಸ ಮಾಡುತ್ತಿದ್ದರು. ನಂತರ ಊರಿಗೆ ಬಂದಿರುತ್ತಾರೆ. ದೂರನ್ನು ಕೊಟ್ಟ ನಂತರ ದಿಃ 16.03.2018 ರಂದು ಪೊಲೀಸರು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ದಿಃ 26.02.2018 ರಂದು ಚಾಸಾ.2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. 7 ನೇ ಆರೋಪಿಯ ಮೂಲಕ ಗೌರಮ್ಮರವರು ನನಗೆ ಪರಿಚಯವಾಗಿರುತ್ತಾರೆ. ಗೌರಮ್ಮ ರವರು ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ತನ್ನ ಗಂಡನ ಪಾಲನ್ನು ಕೋರಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಗೌರಮ್ಮರವರಿಗೆ ತನ್ನ ಗಂಡನ ಪಾಲು ಬಂದ ನಂತರ ಖಾತೆ ಪಹಣಿ ವರ್ಗಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ 7 ನೇ ಆರೋಪಿ ಗೌರಮ್ಮರವರಿಗೆ ಪರಿಚಯವಾಗಿ ತನಗೆ ಖಾತೆ ಪಹಣಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ 7 ನೇ ಆರೋಪಿಯು ಗೌರಮ್ಮರವರಿಗೆ ಖಾತೆ ಪಹಣಿ ಮಾಡಿಸಿಕೊಡುತ್ತೇನೆಂದು ರೂ.ಒಂದು ಲಕ್ಷ ಹಣ ಪಡೆದುಕೊಂಡಿದ್ದ ಎಂದರೆ ಗೊತ್ತಿಲ್ಲ. ನಂತರ ಗೌರಮ್ಮರವರು 7 ನೇ ಆರೋಪಿಗೆ ಖಾತೆ ಪಹಣಿ ಮಾಡಿಸಿಕೊಡುವಂತೆ ಒತ್ತಡ ಹಾಕುತ್ತಿದ್ದರು ಎಂದರೆ ಗೊತ್ತಿಲ್ಲ. ಆದ್ದರಿಂದ ನಾನು ಮತ್ತು 7 ನೇ ಆರೋಪಿ ಶಾಮಿಲಾಗಿ ಗೌರಮ್ಮರವರಿಗೆ ನಾನು ಸಾಲ ಕೊಟ್ಟಂತೆ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಅವರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

20) ಈ ಪ್ರಕರಣ ದಾಖಲು ಮಾಡಲು 7 ನೇ ಆರೋಪಿ ನನಗೆ ಕುಮ್ಮಕ್ಕು ನೀಡಿರುತ್ತಾನೆ ಎಂದರೆ ಸರಿಯಲ್ಲ. ಗೌರಮ್ಮರವರಿಗೆ ಹಣ ವಾಪಸ್ ಕೊಡದೇ 7 ನೇ ಆರೋಪಿ ನನ್ನೊಂದಿಗೆ ಶಾಮೀಲಾಗಿ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿದ್ದಾನೆ ಎಂದರೆ ಸರಿಯಲ್ಲ. ಗೌರಮ್ಮರವರು ನನ್ನಿಂದ ಪಡೆದುಕೊಂಡಿರುವ ರೂ.ಎರಡು ಲಕ್ಷ ಸಾಲದ ಮೊತ್ತದಲ್ಲಿ ರೂ.90,000 ಹಣ ಕೊಡುತ್ತಿಲ್ಲ ಎಂದು ಪೊಲೀಸರಿಗೆ ನಾನು ದೂರನ್ನು ಕೊಟ್ಟಿರುವುದಿಲ್ಲ. ನನ್ನ ಬ್ಯಾಂಕ್ ಖಾತೆಯು ವಡೇರಹಳ್ಳಿಯಲ್ಲಿರುವ ಕರ್ನಾಟಕ ಬ್ಯಾಂಕ್ ನಲ್ಲಿರುತ್ತದೆ. ಗೌರಮ್ಮರವರ ಖಾತೆಯಿಂದ ನನ್ನ ಖಾತೆಗೆ ಯಾವ ದಿನಾಂಕದಂದು ರೂ.1,10,000 ಜಮೆಯಾಗಿರುತ್ತದೆ ಎಂದು ನನಗೆ ನೆನಪಿಲ್ಲ. ಈ ವಿಚಾರವಾಗಿ ತನಿಖಾಧಿಕಾರಿಗಳಿಗೆ ನನ್ನ ಬ್ಯಾಂಕಿನ ಪಾಸ್ ಪುಸ್ತಕವನ್ನು ನೀಡಿರುತ್ತೇನೆ. ವಡೇರಹಳ್ಳಿಯಲ್ಲಿರುವ ಕರ್ನಾಟಕ ಬ್ಯಾಂಕ್ ನ ನನ್ನ ಖಾತೆಗೆ ರೂ.1,10,000 ಗಳನ್ನು ಜಮೆ ಮಾಡಿದ್ದರು ಎಂದು ನನ್ನ ದೂರಿನಲ್ಲಿ ಹೇಳಿರುತ್ತೇನೆ. ಸಾಕ್ಷಿ ಮುಂದುವರಿದು ಕರ್ನಾಟಕ ಬ್ಯಾಂಕ್ ಎಂದು ಹೇಳಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21) ಆರು ತಿಂಗಳ ನಂತರ ಸುಮಾರು ಒಂದೂವರೆ ವರ್ಷಗಳವರೆಗೆ ಸದರಿ ಹಣವನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆಂದು ದೂರಿನಲ್ಲಿ ಮತ್ತು ಮರುಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ದೂರಿನಲ್ಲಿ ಹೇಳಿರುತ್ತೇನೆಂದು ನುಡಿಯುತ್ತಾರೆ. ದೂರಿನಲ್ಲಿಯೂ ಸಹ ಹೇಳಿಲ್ಲ ಎಂದರೆ ಸರಿಯಲ್ಲ. 7 ನೇ ಆರೋಪಿ ಸುರೇಶ ನನಗೆ ಫೋನ್ ಮಾಡಿ ಗೌರಮ್ಮನವರಿಗೆ ಎರಡು ಲಕ್ಷ ಹಣ ಸಾಲವಾಗಿ ಬೇಕು ಎಂದು ನನ್ನನ್ನು ಕೇಳಿದರು ಎಂಬ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ.

22) ಅದಾದ ಎರಡು ದಿನಗಳ ನಂತರ ನಾನು ಎರಡು ಲಕ್ಷ ಹಣದೊಂದಿಗೆ ತುಮಕೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಬಂದಿದ್ದೆ, 1 ನೇ ಆರೋಪಿ ಗೌರಮ್ಮ, 3 ನೇ ಆರೋಪಿ ಅವಿನಾಶ, 7 ನೇ ಆರೋಪಿ ಸುರೇಶ ತುಮಕೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಬಂದಿದ್ದರು, ಆಗ ನನಗೆ 1 ನೇ ಆರೋಪಿ ಗೌರಮ್ಮ ಮತ್ತು 3 ನೇ ಆರೋಪಿ ಅವಿನಾಶ ಪರಿಚಯವಾದರು, 3 ನೇ ಆರೋಪಿ 1 ನೇ ಆರೋಪಿಯ ಮಗ, 1, 3 ಮತ್ತು 7 ನೇ ಆರೋಪಿತರು ನನ್ನಿಂದ ಎರಡು ಲಕ್ಷ ಹಣ ಪಡೆಯುವಾಗ 6 ತಿಂಗಳ ಒಳಗೆ ಹಣ ವಾಪಸ್ ಕೊಡುತ್ತೇವೆಂದು ಹೇಳಿದರು , ನಾನು ಹಣ ಕೊಟ್ಟಿದ್ದೆ , 7 ನೇ ಆರೋಪಿಯ ಪಾಸ್ ಪುಸ್ತಕ ಮತ್ತು ಚೆಕ್ಕನ್ನು ಪಡೆದು ನಾನು ಬೆಂಗಳೂರಿಗೆ ಹೋಗಿದ್ದೆ ಎಂದು ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮರುಹೇಳಿಕೆಯಲ್ಲಿ ಹೇಳಿದ್ದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ.

23) 7 ನೇ ಆರೋಪಿಯ ಚೆಕ್ ಮತ್ತು ಪಾಸ್ ಪುಸ್ತಕದ ಆಧಾರದ ಮೇರೆಗೆ ನಾನು ಸಾಲ ನೀಡಿರುತ್ತೇನೆ. ನಾನು ಗೌರಮ್ಮರವರ ಚೆಕ್ ನ್ನು ನೀಡಬೇಕೆಂದು ನಾನು ಕೇಳಿರುವುದಿಲ್ಲ. ನಾನು 1 ನೇ ಆರೋಪಿಗೆ ಮನೆಗೆ ಬರಲು ಸಾಧ್ಯವಿಲ್ಲ, ತುಮಕೂರಿಗೆ ಬಂದರೆ ನಾನೂ ಸಹ ತುಮಕೂರಿಗೆ ಬರುತ್ತೇನೆ ಎಂದು ಹೇಳಿದ್ದೆ ಎಂದು ದೂರಿನಲ್ಲಿ ಮತ್ತು ಮರುಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 5 ರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದಿಃ 12.04.2018 ರಂದು ತನಿಖಾಧಿಕಾರಿಯವರು ನನ್ನ ಮುಂದುವರಿದ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

24) "ನಾನು ಈ ಹಿಂದೆ ಕಿಬ್ಬನಹಳ್ಳಿ ಪೋ.ಠಾಣೆಯ ಪೋ.ಅಧಿಕಾರಿಗಳಿಗೆ ನನ್ನ ಮರುಹೇಳಿಕೆ ನೀಡುವಾಗ ಗೌರಮ್ಮರವರು ನನ್ನನ್ನು ತುಮಕೂರಿಗೆ ನೀನು ಬಂದು ಹಣ ತೆಗೆದುಕೊಂಡು ಹೋಗು ಎಂದು ಹೇಳಿದರು. ಅದರಂತೆ ನಾನು ದಿಃ 25.02.2018 ರಂದು ಮಧ್ಯಾಹ್ನ 3 ಗಂಟೆ ಸಮಯಕ್ಕೆ ತುಮಕೂರಿಗೆ ಬಂದು ತುಮಕೂರಿನ ಬಸ್

ನಿಲ್ದಾಣದಲ್ಲಿ ಇಳಿದೆನು, ನಾನು ನಂತರ ಗೌರಮ್ಮನವರ ಫೋನ್ ನಂಬರ್ ಗೆ ಕರೆ ಮಾಡಿ ಎಲ್ಲಿ ಇರುವಿರಿ ಎಂದು ಕೇಳಿದ್ದು ನಾವು ಭದ್ರಮ್ಮ ಛತ್ರದ ಹತ್ತಿರ ಇರುವುದಾಗಿ ಹೇಳಿದರು, ನಾನು ಆಟೋದಲ್ಲಿ ಸದರಿ ಭದ್ರಮ್ಮ ಛತ್ರದ ಹತ್ತಿರ ಬಂದೆನು. ಆಗ ಅಲ್ಲಿ ಬೊಲೆರೋ ಕಾರು ನಿಂತಿದ್ದು ಗೌರಮ್ಮ ಮತ್ತು ಅವಿನಾಶ ಹಾಗೂ ಇವರ ಜೊತೆ ಪುನೀತ ಹಾಗೂ ಇನ್ನೂ ಮೂವರು ಜನರು ಇದ್ದರು , ನಾನು ಅವರ ಹತ್ತಿರ ಹೋದಾಗ ನನ್ನನ್ನು ಕಾರಿಗೆ ಹತ್ತಿಸಿಕೊಂಡು ಕಾರಿನೊಳಗೆ ಅವಿನಾಶ, ಮತ್ತು ಪುನೀತ ನೀನು ಬಾ , ನಮ್ಮೂರಿಗೆ ಹಣ ಕೊಡುತ್ತೇವೆ, ಬೋಳಿ ಮಗನೇ ಎಂದು ಹೇಳಿ ಹೊಡೆದಿರುತ್ತಾರೆ ಎಂದು ತಿಳಿಸಿರುವುದಾಗಿರುತ್ತದೆ. ನನಗೆ ಹಣ ಕೊಡದೇ ಇದ್ದುದ್ದರಿಂದ ನಾನು ತಪ್ಪಾಗಿ ಹೇಳಿರುವುದಾಗಿರುತ್ತದೆ " ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು "ನನಗೆ ಹಣ ಕೊಡದೇ ಇದ್ದುದ್ದರಿಂದ ನಾನು ತಪ್ಪಾಗಿ ಹೇಳಿರುವುದಾಗಿರುತ್ತದೆ " ಎಂಬುದನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ನಾನು ಹೇಳಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿಯ ಮರುಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ಎಲ್ಲಾ ವಿಚಾರವನ್ನು ನಾನು ಪೊಲೀಸರ ಮುಂದೆ ತಪ್ಪಾಗಿ ಹೇಳಿರುತ್ತೇನೆಂದು ಹೇಳಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 6 ನೇ ಆರೋಪಿತರು ನನಗೆ ಪರಿಚಯ ಇಲ್ಲದೇ ಇರುವುದರಿಂದ ನನಗೆ ಜಾತಿ ನಿಂದನೆ ಮಾಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ.

25) ಒಂದು ಕೋಣೆಯ ಒಳಗೆ ನನ್ನನ್ನು ಹಾಕಿ ಬಾಗಿಲು ಹಾಕಿದರು, ಆ ಕೋಣೆಯಲ್ಲಿ ತೆಂಗಿನ ಕಾಯಿ ತುಂಬಿಸುವ ಅಟ್ಟ ಇತ್ತು. ಬಾಗಿಲು ಹಾಕಿದ ನಂತರ 1 ರಿಂದ 6 ನೇ ಆರೋಪಿತರು ನನ್ನನ್ನು ಕೂಡಿ ಹಾಕಿದ್ದ ಕೋಣೆಯ ಒಳಗೆ ರಾತ್ರಿ 10 ಗಂಟೆಗೆ ಬಂದು ಕುತಿಳಿದ್ದರು ಎಂದು ನಾನು ದೂರಿನಲ್ಲಾಗಲೀ, ಮರುಹೇಳಿಕೆಯಲ್ಲಾಗಲೀ ತಿಳಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳ ಬಗ್ಗೆ ನ್ಯಾಯಾಲಯದ ಮುಂದೆ ಮೊದಲನೇ ಬಾರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

26) ''ನಾನು ಅವರನ್ನು ನೀವು ನನಗೆ ಕೊಡಬೇಕಾದ ರೂ.90 ಸಾವಿರ ಹಣ ಕೊಡುವುದು ಬೇಡ, ನನ್ನನ್ನು ಬಿಟ್ಟು ಬಿಡಿ ಎಂದು ಹೇಳಿದರೂ 2 ಮತ್ತು 3 ನೇ ಆರೋಪಿಗಳು ನೀನು ಮತ್ತೆ ಹಣ ಕೇಳುತ್ತೀಯಾ'' ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ''ನನಗೆ ಹೊಡೆಯುವಾಗ ಅವರಿಬ್ಬರು ಬೋಳಿ ಮಗನೇ , ಸೂಳೇ ಮಗನೇ ನೀನು ಹಣ ಕೇಳುತ್ತೀಯಾ, ನಿನ್ನನ್ನು ಮನೆಯ ಹೊರಗೆ ಕರೆತಂದಿರುವುದೇ ಹೆಚ್ಚು , ನೀನು ಬೋವಿ ಜನಾಂಗದವನು, ನೀನು ಕೀಳು ಜಾತಿಯವನು, ಅಲ್ಲೇ ರಸ್ತೆಯಲ್ಲಿ ನಿನ್ನನ್ನು ಸಾಯಿಸಬೇಕಾಗಿತ್ತು , ನೀವು ಕೀಳು ಜಾತಿಯವರು , ನಿಮ್ಮನ್ನು ಮನೆಗೆ ಬಿಟ್ಟು ಕೊಳ್ಳುವುದಿಲ್ಲ ಎಂದು ಜಾತಿಯ ಬಗ್ಗೆ ಅವಮಾನ ಮಾಡಿದರು'' ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27) ''1 ನೇ ಆರೋಪಿ ಗೌರಮ್ಮ ಬಂದು ಅವನ ಮುಖ ಏನು ನೋಡುತ್ತೀರಾ, 20 ಲಕ್ಷ ಹಣ ಕೊಡದೇ ಇದ್ದರೆ ಕೊಲೆ ಮಾಡಿ ಸಾಯಿಸಿ ಬಿಡಿ ಎಂದು 2 ರಿಂದ 6 ನೇ ಆರೋಪಿಗಳಿಗೆ ಪ್ರಚೋದನೆ ಮಾಡಿದರು. 1 ನೇ ಆರೋಪಿ ಒಂದು ಮಚ್ಚು ಮತ್ತು ಒಂದು ಚಾಕುವನ್ನು 2 ಮತ್ತು 3 ನೇ ಆರೋಪಿಗಳಿಗೆ ಕೊಟ್ಟಿದ್ದರು. 20 ಲಕ್ಷ ಹಣ ತರಿಸುವುದಾದರೆ ನಿನ್ನನ್ನು ಹೊಡೆಯುವುದಿಲ್ಲ, ಬಡಿಯುವುದಿಲ್ಲ, ಕೊಲೆ ಮಾಡುವುದಿಲ್ಲ ಎಂದು ಹೇಳಿದರು. ನಾನು ಅಷ್ಟು ಹಣ ಇಲ್ಲ ಎಂದು ಹೇಳಿದೆ. 10 ಲಕ್ಷ ಹಣ ತರಿಸುತ್ತೇನೆಂದು ಹೇಳಿದೆ '' ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28) ''ನನ್ನ ಬಲ ಮತ್ತು ಎಡತೊಡೆಗೆ ಚುಚ್ಚಿದ. ನನಗೆ ರಕ್ತ ಬಂದಿದ್ದ ಕಾರಣ ನನ್ನನ್ನು ಸಾಯಿಸಬೇಡಿ , ಬೆಳಿಗ್ಗೆ ಹಣ ತರಿಸುತ್ತೇನೆಂದು ಹೇಳಿದೆ '' ಎಂದು ನಾನು ಪೊಲೀಸರ

ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ''ಆ ದಿನ ರಾತ್ರಿ ನನಗೆ ಊಟ ಮತ್ತು ನೀರು ಕೊಡದೇ ಆರೋಪಿಗಳು ಕೂಡಿ ಹಾಕಿದ್ದ ಕೋಣೆಯ ಬಾಗಿಲನ್ನು ಹಾಕಿಕೊಂಡು ಹೋದರು'' ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29) ದಿಃ 25.02.2018 ರಂದು ನಾನು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಮನೆಯಿಂದ ಹೊರಟು ಕಾರಿನಲ್ಲಿ ನೇರವಾಗಿ ತುಮಕೂರಿಗೆ ಬಂದಿರುತ್ತೇನೆ. ನಮ್ಮ ಮನೆಯಿಂದ ತುಮಕೂರಿಗೆ ಸುಮಾರು 60 ರಿಂದ 65 ಕಿ.ಮೀ ದೂರ ಇರುತ್ತದೆ ಎಂದರೆ ಸಾಕ್ಷಿಯು 80 ಕಿ.ಮಿ ದೂರ ಇರುತ್ತದೆಂದು ನುಡಿಯುತ್ತಾರೆ. ಬೆಂಗಳೂರಿನಿಂದ ತುಮಕೂರಿಗೆ ಸುಮಾರು 2 ಗಂಟೆ ಸಮಯದಲ್ಲಿ ಬರಬಹುದು ಎಂದರೆ ಸರಿ. ನಮ್ಮ ತುಮಕೂರಿಗೆ ಸುಮಾರು 80 ಕಿ. ಮೀಟರ್ ದೂರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಯಿಂದ ಹೊರಟಾಗ ನನ್ನ ಹೆಂಡತಿಗೆ ಎಲ್ಲಿಗೆ ಹೋಗುತ್ತಿದ್ದೇನೆಂದು ತಿಳಿಸಿರುವುದಿಲ್ಲ. ನಾನು ಯಾವ ಸಮಯಕ್ಕೆ ಖಚಿತವಾಗಿ ಮನೆಗೆ ವಾಪಸ್ ಆಗುತ್ತೇನೆಂದು ಹೇಳಲು ಆಗುವುದಿಲ್ಲ. ಅಂದು ರಾತ್ರಿ ಸುಮಾರು 10 ಗಂಟೆಯ ಒಳಗೆ ನನ್ನ ಹೆಂಡತಿ ನನಗೆ ಕರೆ ಮಾಡಿದಾಗ ನಾನು ಎಲ್ಲೋ ಇರುತ್ತೇನೆ ಎಂದು ಹೇಳುವಷ್ಟರಲ್ಲಿ ಆರೋಪಿತರು ನನ್ನ ಮೊಬೈಲ್ ನ್ನು ಕಿತ್ತುಕೊಂಡು ಕಾಲ್ ಕಟ್ ಮಾಡಿರುತ್ತಾರೆ. ನಂತರ ಫೋನ್ ಸ್ವಿಚ್ ಆಫ್ ಆಗಿರುತ್ತದೆ. 1 ನೇ ಆರೋಪಿಯ ಮೊಬೈಲ್ ನಂಬರ್ ನನಗೆ ಗೊತ್ತಿತ್ತು. ಬೆಳಿಗ್ಗೆ ಸುಮಾರು 9 ರಿಂದ 10 ಗಂಟೆ ಸಮಯದಲ್ಲಿ ಆರೋಪಿ ಅವಿನಾಶ್ ರವರು ನನ್ನ ಹೆಂಡತಿಗೆ ಕರೆ ಮಾಡಿ ರೂ.20 ಲಕ್ಷ ಹಣ ತಂದರೆ ನನ್ನನ್ನು ಬಿಡುವುದಾಗಿ, ಇಲ್ಲದಿದ್ದರೆ ನನ್ನನ್ನು ಕೊಲೆ ಮಾಡಿ ಸಾಯಿಸುವುದಾಗಿ ಹೇಳಿರುತ್ತಾರೆ.

30) ದಿಃ 25.02.2018 ರಂದು ರಾತ್ರಿ 9.30 ಗಂಟೆಗೆ ನನ್ನ ಹೆಂಡತಿ ನನಗೆ ಕರೆ ಮಾಡಿದಾಗ ನಾನು ಕೆ.ಬಿ.ಕ್ರಾಸ್ ನಲ್ಲಿ ನನ್ನ ಸ್ನೇಹಿತರೊಂದಿಗೆ ಬಂದಿರುತ್ತೇನೆ , ನೀನು ಭಯಪಡಬೇಡ ಎಂದುಹೇಳಿರುತ್ತೇನೆ ಎಂದರೆ ಇರಬಹುದು. ಆ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿ. ಆಗ ನನ್ನ ಹೆಂಡತಿ ನನಗೆ ಕರೆ ಮಾಡಿದಾಗ ಕೆ.ಬಿ.ಕ್ರಾಸ್ ನಲ್ಲಿ ನನ್ನ ಸ್ನೇಹಿತರೊಂದಿಗೆ ಇದ್ದೆ ಎಂದರೆ ಸಾಕ್ಷಿಯು ಮನೆಯಲ್ಲಿ ಕೂಡಿಹಾಕಿದ್ದರು ಎಂದು ನುಡಿಯುತ್ತಾರೆ. ಆಗ ನಾನು 7ನೇ ಆರೋಪಿಯೊಂದಿಗೆ ಇದ್ದೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಕೂಡಿಹಾಕಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31) ದೂರನ್ನು ನಾನೇ ಬರೆದಿರುತ್ತೇನೆ. ಸಂಜೆ 6 ರಿಂದ 6.30 ಗಂಟೆಗೆ ನಾನು ಪೋ.ಠಾಣೆಗೆ ಹೋಗಿರುತ್ತೇನೆ. 6.30 ರಿಂದ ರಾತ್ರಿ 10.30 ಗಂಟೆಯವರೆಗೆ ನಾನು ಪೋ.ಠಾಣೆಯಲ್ಲಿದ್ದೆ. ನಿಪಿ.4 ನನ್ನ ಬರವಣಿಯಲ್ಲಿ ಇರುವುದಿಲ್ಲ. ಪೊಲೀಸರು ಠಾಣೆಗೆ ಕಾಂಪೌಂಡರ್ ರವರನ್ನು ಕರೆಸಿದ್ದು ಅವರು ನನಗೆ ಪ್ರಥಮ ಚಿಕಿತ್ಸೆಯನ್ನು ನೀಡಿ ಮಾತ್ರೆಯನ್ನು ಕೊಟ್ಟಿದ್ದು ದೂರನ್ನು ಕೊಟ್ಟ ನಂತರ ಹತ್ತಿರದಲ್ಲೇ ಇರುವ ಲಾಡ್ಜ್ ಗೆ ಹೋಗಿ ನಾನು ವಿಶ್ರಾಂತಿ ಪಡೆದಿರುತ್ತೇನೆ. ದೂರನ್ನು ಪಡೆದುಕೊಂಡ ನಂತರ ಪೊಲೀಸರು ನನ್ನನ್ನು ಚಿಕಿತ್ಸೆಗೆ ಕಳುಹಿಸಿರುವುದಿಲ್ಲ. ಆಗ ನನಗೆ ಸುಸ್ತಾಗಿದ್ದರಿಂದ ಬೇಡ ಎಂದು ಹೇಳಿರುತ್ತೇನೆ. ಪೊಲೀಸರು ಠಾಣೆಗೆ ಕಾಂಪೌಂಡರ್ ರವರನ್ನು ಕರೆಸಿ ನನಗೆ ಪ್ರಥಮ ಚಿಕಿತ್ಸೆ ಕೊಡಿಸಿದರು ನಂತರ ನಾನು ಲಾಡ್ಜ್ ಗೆ ಹೋಗಿ ನಾನು ವಿಶ್ರಾಂತಿ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32) ನಮ್ಮ ಮನೆಯಿಂದ ಯಲಹಂಕಾ ಪೋ,ಠಾಣೆಗೆ 15 ಕಿ.ಮಿ ದೂರ ಇರುತ್ತದೆ ಮತ್ತು ಸುಮಾರು 20 ರಿಂದ 25 ನಿಮಿಷದಲ್ಲಿ ಸದರಿ ಠಾಣೆಗೆ ಹೋಗಬಹುದು. 26.02.2018 ರಂದು ಬೆಳಿಗ್ಗೆ 9 ಗಂಟೆಗೆ ನನ್ನಮೊಬೈಲ್ ನಿಂದ ನನ್ನ ಹೆಂಡತಿಗೆ ಕರೆ ಮಾಡಿ ರೂ.20 ಲಕ್ಷ ಹಣ ತಂದರೆ ಬಿಡುತ್ತೇವೆ, ಇಲ್ಲದಿದ್ದರೇ ನನ್ನನ್ನು ಕೊಲೆ ಮಾಡಿ

ಸಾಯಿಸುತ್ತೇವೆಂದು ಹೇಳಿರುತ್ತಾರೆ. ನಂತರ ನಾನು ನನ್ನ ಹೆಂಡತಿಯೊಂದಿಗೆ ಮಾತನಾಡಿ ಪೊಲೀಸರನ್ನು ಕರೆದುಕೊಂಡು ಬರಬೇಡ ಸಾಯಿಸುತ್ತಾರೆಂದು ಹೇಳಿರುತ್ತೇನೆ. ಆದ್ದರಿಂದ ನನ್ನ ಹೆಂಡತಿ ಅನುಮಾನ ಬಂದು ಯಲಹಂಕಾ ಪೋ.ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾಳೆ.

33) ಇಂದು ಬೆಳಿಗ್ಗೆ ನಾನು 7 ನೇ ಆರೋಪಿಯ ವಕೀಲರೊಂದಿಗೆ ನ್ಯಾಯಾಲಯದ ಆವರಣದಲ್ಲಿ ಕುಳಿತು ಚರ್ಚೆ ಮಾಡಿ ಅವರ ನಿರ್ದೇಶನದ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಳಿಗೆರೆಪಾಳ್ಯದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಪೊಲೀಸರೇ ನನ್ನನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು. ಮಾರನೇ ದಿನ ಬೆಳಿಗ್ಗೆ 8 ಗಂಟೆಗೆ ನಾನು ಪೋ.ಠಾಣೆಗೆ ಹೋಗಿರುತ್ತೇನೆ. ನಂತರ ಪೊಲೀಸರು ನನ್ನನ್ನು ಮಹಜರ್ ಗಾಗಿ ಗೌರಮ್ಮರವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಗೌರಮ್ಮರವರ ಮನೆಗೆ ಹೋಗಲು ಬಿಳಿಗೆರೆಯಿಂದ ಹೋಗಬೇಕು ಎಂದರೆ ಸರಿ. ಆಗ ನನಗೆ ಚಿಕಿತ್ಸೆ ಕೊಡಿಸಿರುವುದಿಲ್ಲ. ಸಾಕ್ಷಿಯು ವೈದ್ಯರು ಬೆಳಿಗ್ಗೆ 10.30 ರ ನಂತರ ಬರುತ್ತಾರೆಂದು ನನಗೆ ತಿಳಿಸಿದರು ಎಂದು ಸ್ವತಃ ನುಡಿಯುತ್ತಾರೆ. ಬಿಳಿಗೆರೆಪಾಳ್ಯದಲ್ಲಿ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಇದ್ದೆ , ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ಬೆ. 10.15 ಗಂಟೆಗೆ ಹೋಗಿ 11.30 ಗಂಟೆ ತನಕ ಇದ್ದೆ. ನಂತರ ನಾನು ಪೋ.ಠಾಣೆಗೆ ಹೋಗಿರುತ್ತೇನೆ. ನಾನು ಚಿಕಿತ್ಸೆ ಪಡೆದುಕೊಂಡ ನಂತರ ನನಗೆ ಆರೋಗ್ಯ ಕೂಡಲೇ ಚೆನ್ನಾಗಿ ಆಗಿರುವುದಿಲ್ಲ. ಸುಮಾರು ಒಂದು ತಿಂಗಳ ಕಾಲ ವಿಶ್ರಾಂತಿಯನ್ನು ಪಡೆದುಕೊಂಡಿರುತ್ತೇನೆ.

34) ಚಾಸಾ.2 ರವರು ನೀಡಿರುವ ದೂರನ್ನು ನಾನು ಓದಿರುವುದಿಲ್ಲ. ದಿಃ 27.02.2018 ರಂದು ಪೊಲೀಸರು ಬಿಳಿಗೆರೆಪಾಳ್ಯಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಮಹಜರ್ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೋ.ಠಾಣೆಯಲ್ಲಿಯೇ ತಯಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ಪುನಃ ದಿಃ 12.04.2018 ರಂದು ಡಿವೈಎಸ್‌ಪಿ ರವರು ಸ್ಥಳಕ್ಕೆ ಕರೆದುಕೊಂಡು

ಹೋಗಿದ್ದರು. ನಿಪಿ.3 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರನ್ನು ನನಗೆ ಓದಿ ಹೇಳಲಿಲ್ಲ ಎಂದರೆ ಸರಿ. ದಿಃ 27.02.2018 ರಂದು ಮಹಜರನ್ನು ಮಾಡಿಕೊಡಲು ಆರಕ್ಷಕ ಉಪನಿರೀಕ್ಷಕರು ಮತ್ತು ಅವರ ಸಿಬ್ಬಂದಿ ಬಂದಿದ್ದರು. ಅಂದು ಸ್ಥಳದಲ್ಲಿ ಚಾಕುವನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಮಹಜರನ್ನು ಮಾಡಿಕೊಂಡಿರುತ್ತಾರೆ. ಚಾಕುವನ್ನು ಅವಿನಾಶ್ ಮತ್ತು ಶಿವ ರವರು ತೋರಿಸಿರುತ್ತಾರೆ. ಪಂಚನಾಮೆ (ನಿಪಿ.1) ಕಾಲದಲ್ಲಿ ಸದರಿ ಆರೋಪಿಗಳೂ ಸಹ ಇದ್ದರು. ಸದರಿ ಆರೋಪಿತರ ಸಹಿಗಳನ್ನೇನಾದರೂ ಪಡೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಗೆ ಶಿವಶಂಕರ ಮತ್ತು ಸತೀಶ ರವರು ಸಹಿಗಳನ್ನು ಮಾಡಿರುತ್ತಾರೆ. ಚಾಕುವಿಗೆ ಯಾವ ತರಹದ ಹಿಡಿ ಇತ್ತು ಮತ್ತು ಅದು ಎಷ್ಟು ಉದ್ದ ಇರುತ್ತದೆಂದು ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಾಕ್ಷಿಗೆ ರೂ.500 ಖರ್ಚು ನೀಡುವಂತೆ ಆದೇಶಿಸಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ